Date : 02.04.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಸಿ.ಟಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ, ದಿಃ 07.10.2021 ರಂದು 1 ನೇ ಎದುರುದಾರರು ಹೊರಡಿಸಿದ ಸಾಮಾನ್ಯ ಐತೀರ್ಪಿನ ನಕಲು ದೃಢೀಕೃತ ಪ್ರತಿ ಮತ್ತು ಅವಾರ್ಡ ತಃಖ್ತೆಯ ನಕಲು ದೃಢೀಕೃತ ಪ್ರತಿ, ದಿಃ 21.04.2022 ರ ದಿನಾಂಕದ ಅವಾರ್ಡ ನೋಟೀಸನ್ನು 1 ನೇ ಎದುರುದಾರರು ನಮಗೆ ಕಳುಹಿಸಿದ್ದು, ಅದನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 4 ಎಂದು, ನಮ್ಮ ಮಾಲೀಕತ್ವದ ಆಸ್ತಿಯನ್ನು ಎದುರುದಾರರು ಭೂಸ್ವಾಧೀನ ಪಡಿಸಿಕೊಂಡ ಬಾಬ್ತು ಪರಿಹಾರದ ಹಣವನ್ನು ನಮಗೆ ನೀಡಿದ ಬಗ್ಗೆ ತೋರಿಸಲು ಇರುವ ಒಂದು ಓಚರ್ ನ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–5 ಎಂದು, ಹಿರಿಯೂರು ತಾಲ್ಲೂಕು ಆದಿವಾಲ ಗ್ರಾಮದ ಎರಡು ಆಸ್ತಿಗಳ ಬಗ್ಗೆ ನೊಂದಣಿ ಕ್ರಯಪತ್ರವಾಗಿದ್ದು, ಅದರ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–6 ಮತ್ತು 7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶವನ್ನು ನೀಡಿ ಮುಂದುವರಿದ ಮುಖ್ಯವಿಚಾರಣೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.